ಅಸಮಾಧಾನದಿಂದ ಇಳಿದು ಹೋದ ಮೇಲೆ, ಚಾವಿ ತೆಗೆದು ಬಲಬದಿಯ ಅರ್ಧ ಬಾಗಿಲನ್ನು ದೂಡಿ, ಮಣ್ಣು ನೆಲದ ಮೇಲೆ ಧೊಪ್ ಎಂದು ಹಾರಬೇಕು. ಹಣೆಯ ಮೇಲಿನ ಬೆವರು ಒರೆಸಬೇಕು. ಆದಷ್ಟು ಬೇಗ ತಿಂಡಿ ತಿಂದು, ಸರಿಯಾದ ಜಾಗ ಸಿಗದಿದ್ದರೆ, ಬಸ್ಸಿನ ಸೀಟು, ಯಾವುದೋ ಪೆಟ್ರೋಲ್ ಪಂಪಿನ ಚಾವಡಿ ನೋಡಿ ಧೂಳು ಹೊಡೆದು ನಿದ್ದೆ ಮಾಡಬೇಕು ಮತ್ತೊಂದು ನೈಟ್ ಡ್ಯೂಟಿಗೆ ತಯಾರಾಗಬೇಕು. ಹೀಗೆ ಮುಂದೆ ಸಾಗುವ ಆದರೆ ರಾತ್ರಿ ಪಾಳಿಯ ಬಸ್ ಪ್ರವಾಸದಷ್ಟೇನೂ ದೀರ್ಘವಲ್ಲದ ನಮ್ಮಿಬ್ಬರ ಸಂಭಾಷಣೆ, ಕೆಲವು ಸಾಂಸಾರಿಕ ಹೊಣೆಗಾರಿಕೆಗಳು ತೀರಿದ ನಂತರ ಒಂದು ದಿನ ಚಾಲಕ ವೃತ್ತಿಯನ್ನು ಪೂರ್ತಿ ಬಿಟ್ಟು ನೆಮ್ಮದಿಯ ನಿದ್ದೆ ಮಾಡಬೇಕು ಎಂದು ಗೆಳೆಯ ಹೇಳುವಲ್ಲಿಗೆ ಮುಕ್ತಾಯವಾಗುತ್ತದೆ.

ರಾತ್ರಿ ಪ್ರಯಾಣದ ಚಾಲಕ ಗೆಳೆಯನಿಂದ ಹಿಡಿದು ನಿದ್ದೆ ಮಾಡಗೊಡದ ದೊಡ್ಡ ಕನಸಿನ ಹಿಂದೆ ಹೊರಟವರ ತನಕ, ಕೊಟ್ಟಕೊನೆಗೆ ಅರಸುವುದು ಒಂದು ನಿರಾಳ ನಿದ್ದೆಯನ್ನೇ ಇರಬಹುದು. ನಿದ್ದೆ ಮಾಡಗೊಡದ ಎಚ್ಚರದ ಆಗಿನ ಗುರಿ ಯಾವುದೇ ಇದ್ದರೂ ಅದು ನಿರಮ್ಮಳ ಸಮಾಧಾನ ನೀಡುವ ಮತ್ತೊಂದು ನಿದ್ದೆಯಲ್ಲಿ ಅಂತ್ಯವನ್ನು ಕಾಣಲು ಹಪಹಪಿಸುತ್ತಿರಬಹುದು.

ಅನಿವಾರ್ಯವಾದ ದುಡಿಮೆ, ಸೇವೆಯ ತುಡಿತ, ಯಶಸ್ಸಿನ ಹಸಿವು, ಮಹತ್ವಾಕಾಂಕ್ಷೆಯ ತೃಷೆಗಳು ಒಂದಕ್ಕಿಂತ ಒಂದು ಭಿನ್ನವಾದರೂ, ಕೆಲವನ್ನು ಮೂಲಭೂತ ಅಗತ್ಯ ಇನ್ನು ಕೆಲವನ್ನು ಅನವಶ್ಯಕ ಎಂದು ವಾದಿಸಬಹುದಾದರೂ, ಇವೆಲ್ಲವೂ ಬೇರೆಬೇರೆ ದಿಕ್ಕಿನಿಂದ ಒಂದು ಸಂಪೂರ್ಣ ಸಂತೃಪ್ತ ನಿದ್ದೆಯ ಹುಡುಕಾಟದಲ್ಲಿ ಅಲೆಯುವುದು ಇರಬೇಕು. ದೊಡ್ಡ ಯಶಸ್ಸು ನೀಡುವ ಉನ್ಮಾದ ನಿರರ್ಥಕವೋ, ಸಣ್ಣ ಖುಷಿ ನೀಡುವ ತೃಪ್ತಿಯೇ ಸಾಕೋ, ಇವೆಲ್ಲ ಒಂದೆಯೋ ಬೇರೆಯೋ ಎಲ್ಲರೂ ಹುಡುಕುವ ಆ ನಿದ್ದೆ ಮತ್ತು ಎಚ್ಚರಗಳೇ ಚರ್ಚಿಸಿ ಹೇಳಬೇಕು. ನಿದ್ದೆ ಮತ್ತು ಎಚ್ಚರಗಳ ಕುರಿತಾದ ಜಿಜ್ಞಾಸೆಯನ್ನು ತಿಳಿಗೊಳಿಸಲು ಅಲ್ಲದಿದ್ದರೆ ಅರ್ಥ ವ್ಯಾಪ್ತಿಯನ್ನು ವಿಸ್ತರಿಸಲು ಹಲವು ಸನ್ನಿವೇಶಗಳು ಉದಾಹರಣೆಗಳು ನಮ್ಮನಮ್ಮ ಓದಿನ ಕೇಳುವಿಕೆಯ ಮಿತಿಯಲ್ಲಿ ಸಿಗುತ್ತವೆ. ಅವುಗಳಲ್ಲೊಂದು ಪ್ರಸಂಗ, ಎರಡು ಸಾವಿರ ವರ್ಷಗಳಿಗಿಂತ ಹಿಂದೆ ಇದ್ದು ಹೋಗಿದ್ದ ಅಲೆಕ್ಸಾಂಡರ್ ಚಕ್ರವರ್ತಿಯೂ ಕಾಲಕ್ಕೂ ಕೊಂಡೊಯ್ಯುತ್ತದೆ.

ಗ್ರೀಕ್ ದೊರೆ ಅಲೆಕ್ಸಾಂಡರ್ ದಂಡಯಾತ್ರೆಯನ್ನು ಮಾಡುತ್ತಾ, ಸಾಮ್ರಾಜ್ಯವನ್ನು ವಿಸ್ತರಿಸುತ್ತ ಇಂದಿನ ಭಾರತದ ಅಂದಿನ ಭೂಪ್ರದೇಶಕ್ಕೆ ಬಂದಿದ್ದನಲ್ಲ? ಹಾಗೆ ಅಲ್ಲಿ ಸುತ್ತುತ್ತಿರುಗುವಾಗ, ಮರದ ನೆರಳಿನಲ್ಲಿ ಸೊಂಪಾಗಿ ಮಲಗಿದ್ದ ಸಾಧುವೊಬ್ಬನನ್ನು ಕಂಡನಂತೆ. ಅವರ ನಡುವೆ ಮಾತು ಬೆಳೆಯಿತಂತೆ. 'ಈ ಯುದ್ಧಗಳಿಂದ ಏನು ಸಾಧಿಸುವೆ?' ಎಂದು ಸಾಧು ಕೇಳಿದನಂತೆ. 'ಒಂದೊಂದೇ ರಾಜ್ಯವನ್ನು, ರಾಜರನ್ನು ಗೆದ್ದು, ಎಲ್ಲದಕ್ಕೂ ನಾನೇ ಅರಸ, ಜಗತ್ತಿಗೆ ಚಕ್ರವರ್ತಿಎನಿಸಿಕೊಳ್ಳುತ್ತೇನೆ' ಎಂದನಂತೆ ಅಲೆಕ್ಸಾಂಡರ್. 'ಚಕ್ರವರ್ತಿ ಎನಿಸಿಕೊಂಡ ನಂತರ ಏನು ಮಾಡುವೆ?' 'ಎಲ್ಲರನ್ನು ಎಲ್ಲವನ್ನು ಗೆದ್ದ ನಂತರ ಸುಖವಾಗಿ ನಿದ್ರಿಸುತ್ತೇನೆ' ಎಂದನಂತೆ ಅಲೆಕ್ಸಾಂಡರ್. ಆಗ ಸಾಧು ನಗುತ್ತಾ 'ನಾನದನ್ನು ಈಗಾಗಲೇ ಮಾಡುತ್ತಿದ್ದೇನೆ, ಯಾರನ್ನೂ ಕೊಲ್ಲದೇ, ಗೆಲ್ಲದೆ' ಎಂದನಂತೆ.

ಸಾಧುವೊಬ್ಬನಿಗೆ ಸರಳವಾದ ಬದುಕಿನಲ್ಲಿ ಸುಲಭವಾಗಿ ದಕ್ಕಿದೆ ಎಂದೆನಿಸುವ ಸುಖನಿದ್ರೆ, ಅಲೆಕ್ಸಾಂಡರನಿಗೆ ದಶಕದ ಕಾಲ ಕತ್ತಿಯನ್ನು ಝಳಪಿಸುತ್ತ, ಸಾವಿರಾರು ಮೈಲು ದೂರ ಕುದುರೆಗಳನ್ನು ಕಾಲಾಳುಗಳನ್ನು ದಣಿಸಿ, ರಕ್ತ ಕಣ್ಣೀರುಗಳ ಕಾಲುವೆ ಹರಿಸಿ, ನೂರಾರು ರಾಜರನ್ನು ಮಣಿಸುವುದರಲ್ಲಿ ಸಿಕ್ಕಿತ್ತೊ ಇಲ್ಲವೋ? ಗೊತ್ತಿಲ್ಲ. ಸಾಧುವಿಗೆ ನಿದ್ದೆಯೊಳಗಿನ ಎಚ್ಚರದ ಜೊತೆಗೆ ನಿದ್ದೆಯ ಬಗೆಗೇ ಒಂದು ಎಚ್ಚರ ಇದ್ದಿರಬೇಕು, ರಾತ್ರಿ ಪಾಳಿಯ ಚಾಲಕರಂತೆ. ಏನು ಮಾಡಿ ಅಥವಾ ಮಾಡದೆ ತಾನು ಆ ನಿದ್ದೆಯನ್ನು ಪಡೆಯಬಹುದು ಎನ್ನುವ ಜ್ಞಾನ, ಸಿದ್ಧಿ, ಹೊಳಹು. ಇನ್ನು ಚಕ್ರವರ್ತಿಗೆ, ತಾನು ಬಯಸಿದಂತೆ ಇಡೀ ಭೂಮಿಯನ್ನು ವಶಪಡಿಸಿಕೊಳ್ಳಲು ಸಾಧ್ಯವಾಗದ ಕಾರಣ, ಆತನ ಕನಸಿನ ನಿದ್ರೆ ದೊರಕದೇ ಹೋಗಿರಬಹುದು; ಸಾಧು ಹೇಳಿದ ಅರ್ಥದಲ್ಲಿ ನಿರಾಳವಾದ ನಿದ್ರೆಯೇ ಎಲ್ಲರಿಗೂ ಸಮಾಧಾನ ನೀಡಬಲ್ಲ ಸರಳೋಪಾಯ ಎಂದು ಆ ಕ್ಷಣಕ್ಕೆ ಅಲೆಕ್ಸಾಂಡರನೂ ನಂಬಿದ್ದರೆ ತಾನೆಷ್ಟು